	ಗದಗ ಜಿಲ್ಲೆ		
1)	ಗದಗ	1880	615-68
2)	ಮುಂಡರಗಿ	2011	287-26
3)	ರೋಣ	3736	616-09
4)	ನರಗುಂದ	1043	400-28
5)	ಶಿರಹಟ್ಟಿ	1166	283-33
	ಒಟ್ಟು	9836	2202-64
	ಹಾವೇರಿ ಜಿಲ್ಲೆ		
1)	ಹಾವೇರಿ	2724	571-22
2)	ಬ್ಯಾಡಗಿ	1988	426-99
3)	ಹಿರೇಕೆರೂರು	4300	912-21
4)	ರಾಣೆಬೆನ್ನೂರು	788	219-16
5)	ಸವಣೂರು	506	154-09
6)	ಹಾನಗಲ್	3139	591-46
7)	ಶಿಗ್ಗಾಂವ್	2378	455-06
	ಒಟ್ಟು	15823	3330-19

ಕೊರಟಗೆರೆ ತಾಲ್ಲೂಕಿನಲ್ಲಿರುವ ಸಹಕಾರ ಸಂಘದ ಮಳಿಗೆಗಳ ದುರಸ್ತಿ

1391 (1664) - ಶ್ರೀ ಚನ್ನಿಗಪ್ಪ .ಸಿ. (ಕೊರಟಗೆರೆ), ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳ ಮಳಿಗೆಗಳು ಎಷ್ಟು? (ವಿವರ ಒದಗಿಸುವುದು).

ಆ) ಈ ಸಹಕಾರ ಸಂಘಗಳು ತುಂಬಾ ದುಃಸ್ಥಿತಿಯಲ್ಲಿದ್ದು, ಇದರ ದುರಸ್ಥಿಗೆ ಸರ್ಕಾರವು ಇದುವರೆವಿಗೂ ಗಮನಹರಿಸದೇ ಇರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಈ ಸಹಕಾರ ಸಂಘಗಳ ಮಳಿಗೆಗಳನ್ನು ದುರಸ್ಥಿಗೊಳಿಸಲು ಯಾವಾಗ ಅನುಕೂಲ ಮಾಡಿಕೊಡಲಾಗುವುದು.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು):

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ 16 ಸಹಕಾರ ಸಂಘಗಳಿಗೆ 23 ಗೋದಾಮುಗಳು ಇರುತ್ತದೆ. ವಿವರಗಳನ್ನು ಲಗತ್ತಿಸಿದೆ.

ಆ) ದುಃಸ್ಥಿತಿಯಲ್ಲಿರುವ ಗೋದಾಮುಗಳ ರಿಪೇರಿ: ನವೀಕರಣ: ಉನ್ನತೀಕರಣಕ್ಕಾಗಿ ಸರ್ಕಾರ ಗಮನ ಹರಿಸಿದೆ.

ಇ) ಸಹಕಾರ ಸಂಘಗಳ ನಿಬಂಧಕರಿಂದ ಬಂದ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಅನುಬಂಧ - 1

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು ಸಹಕಾರ ಸಂಘಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ಮಂಜೂರಾತಿಗಾಗಿ ಗೋದಾಮು: ಕಟ್ಟಡಗಳು ಪೂರ್ಣಗೊಂಡಿರುವ ವಿವರ ತಃಖ್ತೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಹಕಾರ ಸಂಘದ ಹೆಸರು	ತಾಲ್ಲೂಕು	ಮಂಜೂರಾದ ವರ್ಷ	ಮೊತ್ತ	ಷರಾ
1.	ವ್ಯ.ಸೇ. ಸ. ಬ್ಯಾಂಕ್ ನಿ. ತುಂಬಾಡಿ	ಕೊರಟಗೆರೆ	1957-58	0.10	ಗೋದಾಮು ಸು-ಸ್ಥಿತಿ-ಯಲ್ಲಿದೆ.
2.	ವ್ಯ.ಸೇ.ಸ.ಸಂಘ ನಿ.ಬರಕ	-"-	58-59	0.10	-"-
3.	ವ್ಯ.ಸೇ.ಸ. ಬ್ಯಾಂಕ್ ನಿ. ಅಗ್ರಹಾರ	-"-	59-60	0.10	ಆ.ಸಿ.ಸಿ. ಗೋದಾಮು ಪೇರಿ ಅವಶ್ಯಕತೆ ಇದೆ.
4.	ವ್ಯ.ಸೇ.ಸ. ಸಂಘ ನಿ. ಹೊಳವನಹಳ್ಳಿ	-"-	61-62	0.10	ಆರ್.ಸಿ.ಸಿ. ಗೋದಾಮು ರಿಪೇರಿ ಅವಶ್ಯಕತೆ ಇದೆ.
5.	ಟಿ.ಎ.ಪಿ.ಸಿ.ಎಂ.ಎಸ್. ಕೊರಟಗೆರೆ	-"-	60-61	0.20	ಗೋದಾಮು ಸುಸ್ಥಿತಿಯ-ಲ್ಲಿದೆ.

1	2	3	4	5	6
6.	ವ್ಯ.ಸೇ.ಸ. ಬ್ಯಾಂಕ್, ನಿ., ಆಗ್ರಹಾರ	-"-	63-64	0.125	ಕ್ರ.ಸಂ.3 ರಲ್ಲಿದ್ದಂತೆ.
7.	-"- ಎಲೆರಾಂಪುರ	-"-	63-64	0.125	ಮೇಲ್ಛಾವಣಿ ಷೀಟು ಬದಲಾವಣೆ ಅವಶ್ಯಕವಿದೆ.
8.	-"- ಕೊಳಾಲ	ಕೊರಟಿಗೆರೆ	64-65	125.1	99-2000ರಲ್ಲಿ ಆರ್ಥಿಕ ನೆರವು ಪಡೆದು ಗೋದಾಮು ರಿಪೇರಿ ಮತ್ತು ಉನ್ನತೀ-ಕರಣಗೊಳಿ-ಸಿದೆ.
9.	-"- ವಡ್ಡಗೆರೆ	-"-	64-65	0.125	ಉನ್ನತೀ-ಕರಣಕ್ಕೆ ಪ್ರಸ್ತಾವೆ ಸಲ್ಲಿಸಿದೆ.
10.	ವಿಎಸ್ಎಸ್ಬಿಎನ್, ಸೋಂಪುರ (ಅಕ್ಕಿರಾಂಪುರ ಎಸ್ಸಿಎಸ್)	-"-	65-66	0.35	98-99ರಲ್ಲಿ ಆರ್ಥಿಕ ನೆರವು ಮಂಜೂ-ರಾಗಿ ಗೋದಾಮು ರಿಪೇರಿ ಮತ್ತು ನವೀಕರಣ ಗೊಳಿಸಿದೆ.
11.	ವಿಎಸ್ಎಸ್ಬಿಎನ್, ಅರಸಾಪುರ	-"-	65-66	0.125	ಷೀಟ್ ರೂಫ್ ಸು-ಸ್ಥಿತಿಯಲ್ಲಿದೆ.

1	2	3	4	5	6
12.	ಟಿಎಪಿಸಿಎಂಎಸ್, ಕೊರಟಗೆರೆ (ಮಲ್ಲೇಕಾವು)	-"-	64-65	0.125	-"-
13.	ವಿಎಸ್ಎಸ್ಬಿಎನ್ ತೋವಿನಕೆರೆ (ಕುರುಂಕೋಟಿ)	-"-	65-66	0.125	-"-
14.	ವಿಎಸ್ಎಸ್ಬಿಎನ್, ಮಾವತ್ತೂರು	ಕೊರಟಿಗೆರೆ	67-68	0.125	98-99ರಲ್ಲಿ ಆರ್ಥಿಕ ನೆರವು ಮಂಜೂರಾಗಿದ್ದು, ರಿಪೇರಿ ದಿ: ಉನ್ನತೀಕರಣ ಗೊಳಿಸಿದೆ.
15.	ವಿಎಸ್ಎಸ್ಬಿಎನ್, ಬೇಡೋಣ	ಕೊರಟಿಗೆರೆ	67-68	0.125	ಷೀಟು ರೂಫ್ ಸುಸ್ಥಿತಿಯಲ್ಲಿದೆ.
16.	ವಿಎಸ್ಎಸ್ಬಿ ಎನ್. ವಡ್ಡಗೆರೆ (ಟಿ. ಗೊಲ್ಲಹಳ್ಳಿ)	-"-	67-68	0.125	-"-
17.	ವಿಎಸ್ಎಸ್ಬಿಎನ್. ಅರಸಾಪುರ	-"-	65-66	0.125	ಗೋದಾಮು ರಿಪೇರಿ ಅವಶ್ಯಕವಿದೆ.
18.	ವಿಎಸ್ಎಸ್ಎನ್. ಪಾತಗಾನಹಳ್ಳಿ	-"-	80-81	0.365	ರಿಪೇರಿ ಅವಶ್ಯಕವಿದೆ. ಪ್ರಸ್ತಾವೆ ಸಲ್ಲಿಸಿದ್ದು, ಮಂಜೂರಾಗಿಲ್ಲ.

1	2	3	4	5	6
19.	ವಿಎಸ್ಎಸ್ ಬಿಎನ್, ಕಸಬ ಕೊರಟಗೆರೆ	-"-	80-81	0.365	ಸುಸ್ಥಿತಿ-ಯಲ್ಲಿದೆ.
20.	ಟಿಎಪಿಸಿಎಂಎಸ್, ಕೊರಟಗೆರೆ	-"-	86-87	4.20	-"-
21.	ವಿಎಸ್ಎಸ್ಬಿಎನ್, ಸೋಂಪುರ	-"-	87-88	1.65	-"-
22.	-"- , ಚಿಂಡೋಣಿ	-"-	93-94	2.46	-"-
23.	-"- , ಮಾವತ್ತೂರು	-"-	95-96	2.46	-"-

ಸಂಕ್ಷಿಪ್ತ ಮಾಹಿತಿ

1.	ತಾಲ್ಲೂಕಿನಲ್ಲಿ ಒಟ್ಟು ಮಂಜೂರಾಗಿ ಪೂರ್ಣಗೊಂಡ ಗೋದಾಮುಗಳು	-	23
2.	ಸುಸ್ಥಿತಿಯಲ್ಲಿರುವ ಗೋದಾಮುಗಳು	-	13
3.	ದುರಸ್ಥಿಗೊಳಿಸಿರುವ ಮಳಿಗೆಗಳು (ಗೋದಾಮುಗಳು)	-	03 (ಅನುಬಂಧ-2 ರಲ್ಲಿ ವಿವರಿಸಿದೆ.)
4.	ದುರಸ್ಥಿಗೊಳಿಸಲು ಅವಶ್ಯಕತೆಯಿರುವ ಗೋದಾಮುಗಳು	-	07

ಅನುಬಂಧ-2

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಸಹಕಾರ ಸಂಘಗಳ ಗೋದಾಮು

ದುರಸ್ಥಿ: ನವೀಕರಣ: ಉನ್ನತೀಕರಣಕ್ಕಾಗಿ ಸರ್ಕಾರದಿಂದ ಆರ್ಥಿಕ ನೆರವು ಮಂಜೂರಾಗಿರುವ ಬಗ್ಗೆ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಹಕಾರ ಸಂಘದ ಹೆಸರು	ತಾಲ್ಲೂಕು	ಮಂಜೂರಾತಿ ವರ್ಷ	ಮಂಜೂರಾಗಿರುವ	ಕೆಲಸ ಪೂರ್ಣಗೊಂಡಿರುವ ದಿನಾಂಕ:
1.	ವ್ಯ.ಸೇ.ಸ.ಸಂ.ನಿ., ಸೋಂಪುರ	ಕೊರಟಗೆರೆ	1998-99	0.53	23-11-2000
2.	ವ್ಯ.ಸೇ.ಸ.ಸಂ.ನೀ., ಮಾವತ್ತೂರು	-"-	98-99	1.20	12-10-2000

3.	ವ್ಯ.ಸೇ.ಸ.ಸಂ.ನಿ., ಕೋಳಾಲ	-"-	1999-2000	1.52	16-02-2002

ಕೊರಟಗೆರೆ ತಾಲ್ಲೂಕಿನ ಕೆರೆಗಳ ಹೂಳೆತ್ತುವುದು

1392 (1669) - ಶ್ರೀ ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಾದ್ಯಾಂತ ಕೆರೆಗಳಲ್ಲಿ ಹೂಳು ತುಂಬಿದ್ದು ಇವುಗಳನ್ನು ತೆಗೆಯಲು ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವೇ;

ಆ) ಈ ಕೆರೆಗಳಲ್ಲಿ ಹೂಳು ಅಧಿಕವಾಗಿದ್ದು; ಇದರಿಂದ ಜಲ ಮಟ್ಟವು ಕುಸಿದು ಹೋಗಿದ್ದು ಹೂಳು ತೆಗೆಯಲು ಅನುದಾನ ಬಿಡುಗಡೆ ಮಾಡಿ ಜಲಮಟ್ಟವನ್ನು ಕಾಪಾಡಿ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚಿನ ಅಚುಕಟ್ಟು ಇರುವ 45 ಕೆರೆಗಳಿವೆ. ಈ ಕೆರೆಗಳು ರಾಜ್ಯದಲ್ಲಿರುವ ಬಹುತೇಕ ಕೆರೆಗಳಂತೆ ಹೂಳಿನಿಂದ ತುಂಬಿರುತ್ತದೆ. ಕೊರಟಗೆರೆ ತಾಲ್ಲೂಕಿನಲ್ಲಿ 1999-2000ನೇ ಸಾಲಿನಲ್ಲಿ ಅಕ್ಕಿರಾಂಪುರ ಕೆರೆ ಹಾಗೂ ಬುಕ್ಕಾಪಟ್ಟಣ ನಾಗೇನಹಳ್ಳಿ ಕೆರೆ ಈ ಎರಡು ಕೆರೆಗಳ ಕಾಮಗಾರಿಗೆ ಪ್ರತ್ಯೇಕವಾಗಿ ರೂ: 4.00 ಲಕ್ಷಗಳ ಅಂದಾಜುಗಳನ್ನು ಮಂಜೂರು ಮಾಡಿತ್ತಾದರೂ, ಇಂತಹ ಕಾಮಗಾರಿಗಳನ್ನು ಜಲ ಸಂವರ್ಧನೆ ಕಾರ್ಯಕ್ರಮದೊಡನೆ ಸಮನ್ವಯಗೊಳಿಸುವ ಉದ್ದೇಶದಿಂದ ಈ ಕಾಮಗಾರಿಯನ್ನು ಮಾಡಿರುವುದಿಲ್ಲ. ಈಗ ಹೂಳೆತ್ತುವ ಕಾಮಗಾರಿಯನ್ನು ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯಗಳೊಂದಿಗೆ ಕೈಗೊಳ್ಳಲು "ರೈತ ಕಾಯಕ ಕೆರೆ" ಕಾರ್ಯಕ್ರಮವನ್ನು ರೂಪಿಸಿ, ಅಚ್ಚುಕಟ್ಟುದಾರರ ಸಹಭಾಗಿತ್ವದೊಂದಿಗೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೆರೆಗಳಲ್ಲಿ ಹೂಳು ತುಂಬಿ ಜಲ ಸಂಗ್ರಹಣ ಸಾಮರ್ಥ್ಯವು ಕಡಿಮೆ ಆಗಿರುತ್ತದೆ. ಇಂತಹ ಕೆರೆಗಳ ಹೂಳು ತೆಗೆಯುವ ಕಾರ್ಯವನ್ನು ಕೆರೆಗಳ ಸಮಗ್ರ ಅಭಿವೃದ್ಧಿದೊಂದಿಗೆ ಹಂತ ಹಂತವಾಗಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದು ಕೆರೆಯಂತೆ 745 ಕೆರೆಗಳನ್ನು ಗುರುತಿಸಿ "ರೈತ ಕಾಯಕ ಕೆರೆ" ಕಾರ್ಯಕ್ರಮದಡಿಯಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಸನೀಇ: 241: ಕೆಜದು: 2000 ದಿನಾಂಕ:28-11-2001 ರಲ್ಲಿ ಅನುಮೋದನೆ ನೀಡಲಾಗಿದೆ. ಇದರಲ್ಲಿ ಕೊರಟಗೆರೆ ತಾಲ್ಲೂಕಿಗೆ ಸೇರಿದ 4 ಕೆರೆಗಳು ಇರುತ್ತವೆ. ಈ ಆದೇಶದಲ್ಲಿ ವಿಧಿಸಿರುವ ಪೂರ್ವ ನಿಬಂಧನೆ ಹಾಗೂ ಕಾಲಮಿತಿಯಂತೆ ರೈತರಲ್ಲಿ ಅರಿವನ್ನು ಸೃಷ್ಟಿಸಿ ಬಳಕೆದಾರರ ಸಂಘವನ್ನು ರಚಿಸುವುದಕ್ಕೆ 6 ರಿಂದ 9 ತಿಂಗಳು ಹಾಗೂ ನಂತರ ಅಂದಾಜು ಪಟ್ಟಿಯನ್ನು ತಯಾರಿಸಲು 3 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಇಂತಹ ಪೂರ್ವ ನಿಬಂಧನೆಗಳಂತೆ ಪೂರ್ವಭಾವಿ ಕ್ರಮಗಳನ್ನು ಕೈಗೊಂಡು ಪೂರ್ಣಗೊಳಿಸಿದ ನಂತರ ಅಂದಾಜುಗಳನ್ನು ಮಂಜೂರು ಮಾಡಿಕೊಂಡು ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.